ವಿಶ್ವವಾಣಿ

## ಸಂಪಾದಕೀಯ

### ಮಕ್ಕಳ ಮನಸ್ಸಿಗೆ ಸ್ಪಂದಿಸಿ

ಕಳೆದ ಹತ್ತು ವರ್ಷಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, 2022, ಜನವರಿಯಿಂದ ಜುಲೈವರೆಗೂ ರಾಜ್ಯದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮುಂದುವರಿದ ಜಿಲ್ಲೆಗಳಾದ ಬೆಂಗಳೂರು, ಮಂಗಳೂರು, ತುಮಕೂರು, ಮೈಸೂರು ಜಿಲ್ಲೆಗಳಲ್ಲೆ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿ ಕಂಡು ಬರುತ್ತಿವೆ ಎಂದು ವರದಿಯಾಗಿದೆ. ಇವೆಲ್ಲವೂ ಕ್ಷುಲ್ಲಕ ಕಾರಣಕ್ಕೆ ನಡೆದ ಆತ್ಮಹತ್ಯೆಗಳು. ಜೂನ್ 12 ರಂದು ತಾಯಿಯ ಹುಟ್ಟು ಹಬ್ಬಕ್ಕೆ ಶುಭಾಶಯ ತಿಳಿಸಲು ಶಾಲೆಯ ವಾರ್ಡನ್ ಮೊಬೈಲ್ ನೀಡಲಿಲ್ಲ ಎಂಬ ಕಾರಣಕ್ಕೆ ಹೊಸಕೋಟೆ ಮೂಲದ ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ರಾಜ್ಯದಲ್ಲಿ ಆತಂಕ ಸೃಷ್ಟಿಸಿದೆ. ಇತ್ತೀಚೆಗೆ ನಡೆದ ಬಹುತೇಕ ಆತ್ಮಹತ್ಯೆಗಳು ಇಂತಹ ಕ್ಷುಲ್ಲಕ ಕಾರಣಕ್ಕೇ ಎನ್ನಲಾಗಿದೆ. ಮಕ್ಕಳು ಚೆನ್ನಾಗಿ ಓದಿ, ಒಳ್ಳೆಯ ಅಂಕ ಪಡೆಯಬೇಕು, ಹೆಚ್ಚಿನ ಸಂಬಳ ದೊರೆಯುವ ನೌಕರಿ ಪಡೆಯಬೇಕೆಂಬ ಆಕಾಂಕ್ಷೆ ಇಂದಿನ ಪೋಷಕರಲ್ಲಿ ಹೆಚ್ಚು ತೀವ್ರವಾಗಿದೆ. ಇದು ತಪ್ಪೇನಲ್ಲ. ಆದರೆ ಈ ದಿಸೆಯಲ್ಲಿ ಮಕ್ಕಳನ್ನು ಶಿಸ್ತಿನಿಂದ ಬೆಳೆಸಿ, ಉತ್ತಮ ವಿದ್ಯೆ ಕೊಡಿಸಲು ಅವರನ್ನು ವಸತಿಶಾಲೆಗೆ ಸೇರಿಸುವ ಮುನ್ನ ಒಂದಷ್ಟು ಯೋಚಿಸುವುದು ಒಳ್ಳೆಯದು. ಮಕ್ಕಳು ಸಣ್ಣ ವಯಸ್ಸಿನಲ್ಲಿದ್ದಾಗ ಅವರ ಜತೆ ಒಡನಾಟ, ಆಟ, ಪಾಠ, ಸಂವಹನ ಪೋಷಕರಿಗೆ ಖುಷಿ, ಸಂತಸ ನೀಡುತ್ತವೆ. ಮಕ್ಕಳ ಜತೆಗಿನ ಇಂತಹ ಖುಷಿಯ ಕ್ಷಣಗಳು ಪೋಷಕರು ತಮ್ಮೊಳಗೆ ಸದಾ ಕಾಪಿಟ್ಟುಕೊಳ್ಳಬೇಕಾದಂತಹವು. ಮಕ್ಕಳಿಗೂ ತಮ್ಮ ತಂದೆ, ತಾಯಿ, ಸಹೋದರ, ಸಹೋದರಿಯರ ಜತೆಗಿನ ಬಾಲ್ಯದ ಒಡನಾಟದ ಕ್ಷಣಗಳು ಅವರ ಜೀವನದ ಅಮೂಲ್ಯ ಕ್ಷಣಗಳಾಗಿರುತ್ತವೆ. ಪೋಷಕರು ಮತ್ತು ಮಕ್ಕಳಿಗೆ ಇಂತಹ ಅವಿಸ್ಮರಣೀಯ ಕ್ಷಣಗಳಿಗೆ ಅವಕಾಶ ದೊರೆಯದಂತೆ ಮಕ್ಕಳನ್ನು ಎಳವೆಯಲ್ಲೇ ವಸತಿಶಾಲೆಗಳಿಗೆ ಸೇರಿಸುವುದು ಸೂಕ್ತವಲ್ಲ. ಮಕ್ಕಳ ಜತೆ ನಿಯಮಿತವಾಗಿ ಸಮಯ ಕಳೆಯುತ್ತಾ ಇದ್ದರೆ ಅವರ ಮನಃಸ್ಥಿತಿಯ ಅರಿವು ಪೋಷಕರಿಗೆ ಇರುತ್ತದೆ. ಮಕ್ಕಳ ಮಾತುಗಳಿಗೆ ಕಿವಿಯಾಗಿ, ಅವರ ಭಾವನೆಗಳಿಗೆ ಹೃದಯವನ್ನು ಮುಕ್ತವಾಗಿ ತೆರೆದಿಟ್ಟಲ್ಲಿ ಕಾಲಕಾಲಕ್ಕೆ ಅವರು ನೀಡುವ ಸೂಕ್ಷ್ಮ ಸಂದೇಶಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಮಕ್ಕಳು ನೀಡುವ ಇಂತಹ ಸಂದೇಶಗಳನ್ನು ಸಕಾಲದಲ್ಲಿ ಗ್ರಹಿಸಿ, ಸ್ಪಂದಿಸುವುದು ಪೋಷಕರ ಮೊದಲ ಆದ್ಯತೆಯಾಗಬೇಕು.

## ಸೊಂಪಾದಕೀಯ

### ಸಿಎಂ ಬೊಮ್ಮಾಯಿ 'ಮ್ಯಾಟ್ ಫಿಕ್ಸಿಂಗ್'

ಮೊನ್ನೆ ಅಂತರಾಷ್ಟ್ರೀಯ ಯೋಗ ದಿನದಂದು ನಮ್ಮ ಸಿಎಂ ಬಸವರಾಜ ಬೊಮ್ಮಾಯಿ ಅವರು ಯೋಗ ಮಾಡಲು ಹರಸಾಹಸ ಪಟ್ಟ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪಾಪ, ಎಲೆಕ್ಷನ್ ಟೈಮು ಹತ್ತಿರ ಬರ್ತಾ ಇದೆ. ಜತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಮೋದಿಜಿ ಬೆಂಗಳೂರಿಗೆ ಬಂದಿದ್ದಾರೆ. ಹಾಗಾಗಿ ಮೋದಿ ಅವರನ್ನು ಮೆಚ್ಚಿಸೋಕೆ ಬೊಮ್ಮಾಯಿ ಇಷ್ಟೊಂದ್ ಕಷ್ಟ ಪಡ್ತಾ ಇದ್ದಾರೆ ಅಂತ ಅನೇಕರು ಮಾತಾಡಿಕೊಳ್ತಾ ಇದ್ದಾರೆ. ಅದೇನೂ ತಪ್ಪಲ್ಲ ಬಿಡಿ. ಪಾಪ, ಈ ವಯಸ್ಸಲ್ಲೂ, ದೇಹಕ್ಕಿರುವ ಅನಾರೋಗ್ಯದ ನಡುವೆಯೂ, ಪಾಪ ಬೊಮ್ಮಾಯಿ ಅವರು, ಯೋಗ ಮ್ಯಾಟ್ ಮೇಲೆ ಕೂತು ಸಾಹಸಗಳ ಆಸನ ಮಾಡಿದ್ದಾರೆ. ಎಲೆಕ್ಷನ್ ಬರೋವರೆಗೂ ನಾನೇ ಮುಖ್ಯಮಂತ್ರಿ ಆಗಿರಬೇಕು ಅನ್ನೋ ನಿರೀಕ್ಷೆಯಲ್ಲಿ ಮೋದಿ ಅವರ ಮುಂದೆ 'ಯೋಗ ಮ್ಯಾಟ್' ಮೇಲೆ ಕೂತು ಯೋಗ ಮಾಡಿ 'ಮ್ಯಾಟ್ ಫಿಕ್ಸಿಂಗ್' ಮಾಡಿಕೊಳ್ಳೋದ್ರಲ್ಲಿ ತಪ್ಪೇನಿಲ್ಲ ಬಿಡಿ. ಅಲ್ಲದೆ ಪಾಪ ಅವರಿಗೆ ವಯಸ್ಸಾಗಿದೆ. ಸಿಎಂ ಆಗಿರೋ ಬೊಮ್ಮಾಯಿ ಅವರದ್ದು ಮೈ ಬಗ್ಗಿಸಿ ದುಡಿಯುವಂಥ ಕೆಲಸವೂ ಅಲ್ಲ, ವಯಸ್ಸೂ ಅಲ್ಲ. ಹಾಗಾಗಿ ಸ್ವಲ್ಪ ಕಷ್ಟ ಆಗಿರೋದು ಸಹಜ. ಅಲ್ಲದೆ, ಅಪರೂಪಕ್ಕೆ ಎನ್ನುವಂತೆ ಸಿಕ್ಕ ಅವಕಾಶದಲ್ಲಿ ಮುಖ್ಯಮಂತ್ರಿ ಆಗಿದ್ದಾರೆ ಬೊಮ್ಮಾಯಿ. ಯಾರಿಗೆ ತಾನೇ ಅದನ್ನು ಕಳೆದುಕೊಳ್ಳುವ ಆಸೆ ಇರುತ್ತೆ ಹೇಳಿ. ಹಾಗಾಗಿ, ಅವರು ಯೋಗ ಮ್ಯಾಟ್ ಮೊರೆ ಹೋಗಿ ತಮ್ಮ ಮುಖ್ಯಮಂತ್ರಿ ಹುದ್ದೆಯ ಅವಧಿ 'ಮ್ಯಾಟ್ ಫಿನಿಷ್' ಆಗದಂತೆ ನೋಡಿಕೊಂಡಿದ್ದಾರೆ. ಇದು 'ಒಂಥರಾ ಲೆಕ್ಕಾಚಾರದ' ವಿಷಯ, ಆದ್ದರಿಂದ, ಈ ವಿಷಯದಲ್ಲಿ ಬೊಮ್ಮಾಯಿ ಅವರ 'ಮ್ಯಾಟ್ ಮ್ಯಾಟಿಕ್ಸ್' ಸರಿಯಾಗಿಯೇ ಇದೆ ಎನ್ನುತ್ತಿದ್ದಾರೆ ಅನಧಿಕೃತ ರಾಜಕೀಯ ಪಂಡಿತರು. ಹಾಗಾಗಿ, ಹೀಗೆಲ್ಲಾ ಯೋಗ ಮ್ಯಾಟ್ ಮೇಲೆ ಯೋಗ ಮಾಡಿ, ಹೈಕ ಮ್ಯಾಂಡ್ ಅನ್ನು ಮೆಚ್ಚಿಸಿ, ಸಂಬಂಧ ಬೆಳೆಸುವ ಬೊಮ್ಮಾಯಿ ಅವರ 'ಮ್ಯಾಟ್ರಿಮೊನಿ' ಐಡಿಯಾ ವರ್ಕ್ ಔಟ್ ಆಗಿದೆ ಅಂತಾನೇ ಹೇಳಬಹುದು. ಆದ್ರೆ, ತಮ್ಮನ್ನು ಮೆಚ್ಚಿಸೋಕೆ ಅಂತಲೇ ಬೊಮ್ಮಾಯಿ ಅವರು ಹೀಗೆಲ್ಲಾ ಯೋಗ ಮ್ಯಾಟ್ ಮೇಲೆ ಸರ್ಕಸ್ ಮಾಡ್ತಿದ್ದಾರೆ ಅಂತ ಗೊತ್ತಾದ ಮೋದಿಜಿ, ಓಹೋ ಇದಾ ಮ್ಯಾಟ್ರು'?', ಅಂತ ಕುತ್ತಿಗೆ ಹಿಂದೆ ಬಲಗೈ ತೆಗೆದುಕೊಂಡು ಹೋಗಿ ಎಡಗಡೆಯಿಂದ, ತಮ್ಮ ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದನ್ನು ಮಾತ್ರ ಯಾವ ಸುದ್ದಿವಾಹಿನಿಗಳೂ ಪ್ರಸಾರ ಮಾಡಿಲ್ಲ.

## ಸಂಪಾದಕರ ಸದ್ಯಶೋಧನೆ

### ಭಾಷಾ ಕಲಿಕೆ

ಇಂದಿಗೂ ಹಿಂದಿ ನಮಗೆ ಹಿಂದಿ ಅಲ್ಲವೇ ಅಲ್ಲ, ಅದು ಉತ್ತರ ಭಾರತದವರ, ಬಹುಸಂಖ್ಯಾತರ, ಕೇಂದ್ರ ಸರಕಾರದ, ದಕ್ಷಿಣದವರನ್ನು ಅಣಕಿಸುವ, ಸವಾರಿ ಮಾಡುವ ಒಂದು ಬುಲ್ಡೋಜರ್ ಭಾಷೆಯಾಗಿಯೇ ವಿಂಧ್ಯ ಪರ್ವತದಿಂದ ಕೆಳಗಿರುವವರಿಗೆ ಅನಿಸುತ್ತದೆ. ಇದೇ ಈ ಎಲ್ಲಾ ಸಮಸ್ಯೆಗಳಿಗೆ ಕಾರಣ. ಭಾಷೆಗಳನ್ನು ಕಲಿತಷ್ಟೂ ವ್ಯಕ್ತಿ ಸಬಲನಾಗುತ್ತಾನೆ, ಹೆಚ್ಚು ತೆರೆದುಕೊಳ್ಳುತ್ತಾನೆ, ಸಾಮಾಜಿಕವಾಗಿ ಸ್ವೀಕೃತನಾಗುತ್ತಾನೆ, ಆಪ್ತನಾಗುತ್ತಾನೆ, ಸಂವಹನಶೀಲನಾಗುತ್ತಾನೆ ಎಂದು ನಮಗೆ ಅನಿಸುವುದಿಲ್ಲ. ಅದು ಅವನ ಬಹಳ ದೊಡ್ಡ ತಾಕತ್ತು ಎಂದು ಭಾವಿಸುವುದಿಲ್ಲ. ಭಾಷೆಗಿರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ಕೊಂಕಣಿ, ಜರ್ಮನ್, ಸ್ಪ್ಯಾನಿಷ್, ರಷ್ಯನ್ ಭಾಷೆಗಳನ್ನು ಕಲಿಯಲು ಅವೂ ಸಹ ಭಾಷೆ ಎಂಬುದರ ಹೊರತಾಗಿ ಬೇರೆ ಯಾವ ಕಾರಣಗಳು ಬೇಕು? ನಮ್ಮ ಖುಷಿಗಾಗಿ, ಜ್ಞಾನವೃದ್ಧಿಗಾಗಿ, ಹವ್ಯಾಸಕ್ಕಾಗಿ ಕಲಿಯಬಹುದಲ್ಲ ? ಮುಸಲ್ಮಾನರಾಗದೇ ಉರ್ದು, ಅರೇಬಿಕ್ ಕಲಿಯಬಹುದಲ್ಲ? ಯಹೂದಿಯರಾಗದೇ ಹೀಬ್ರೂವನ್ನೂ ಏಕೆ ಕಲಿಯಬಾರದು? ಈ ವಿಷಯದಲ್ಲಿ ನಾವು ಚೀನಿಯರಿಂದ ಕಲಿಯುವುದು ಬೇಕಾದಷ್ಟಿದೆ. ಜಾಗತೀಕರಣಕ್ಕೆ ಇಡೀ ಜಗತ್ತು ತೆರೆದುಕೊಂಡ ಸಂದರ್ಭದಲ್ಲಿ, ಚೀನಾ ಮೊದಲು ಮಾಡಿದ ಕೆಲಸವೆಂದರೆ ಇಂಗ್ಲಿಷ್ ಸೇರಿದಂತೆ ಸಾಧ್ಯವಾದಷ್ಟು ಎಲ್ಲಾ ವಿದೇಶಿ ಭಾಷೆಗಳನ್ನು ಕಲಿಯುವಂತೆ ತನ್ನ ದೇಶವಾಸಿಗಳಿಗೆ ಕರೆಕೊಟ್ಟಿದ್ದು. ಈ ಪ್ರಯುಕ್ತ ಚೀನಾ ಬಹಳ ದೊಡ್ಡ ಪ್ರಮಾಣದಲ್ಲಿ ತನ್ನ ದೇಶಕ್ಕೆ ಇಂಗ್ಲಿಷ್, ರಷ್ಯನ್, ಸ್ಪ್ಯಾನಿಷ್, ಜರ್ಮನ್, ಫ್ರೆಂಚ್, ಹಿಂದಿ, ಡ್ಯಾನಿಷ್ ಭಾಷಾ ಮೇಷ್ಟ್ರುಗಳನ್ನು ಕರೆಯಿಸಿಕೊಂಡು ಭಾಷಾ ಕಲಿಕಾ ಕೇಂದ್ರಗಳನ್ನು ತೆರೆದಿದ್ದು. ಸೋಜಿಗವೆಂದರೆ, ಇಂದು ಜಗತ್ತಿನಲ್ಲಿ ಅತಿ ಹೆಚ್ಚು ಇಂಗ್ಲಿಷ್ ಮಾತಾಡುವ ಜನರಿರುವ ದೇಶವೆಂದರೆ, ಇಂಗ್ಲೆಂಡ್ ಅಲ್ಲ, ಅಮೆರಿಕ ಅಲ್ಲ, ಅದು ಚೀನಾ! ಫ್ರೆಂಚನ್ನು ಫ್ರಾನ್ಸ್‌ಗಿಂತ ಅತಿ ಹೆಚ್ಚು ಮಾತಾಡುವ ದೇಶವಿದ್ದರೆ ಅದು ಚೀನಾ! ಜರ್ಮನ್ ಭಾಷೆ ಮಾತಾಡುವವರು ಜರ್ಮನಿಗಿಂತ ಹೆಚ್ಚು ಚೀನಾದಲ್ಲಿದ್ದಾರೆ! ಹಾಗೆಂದು ಇವರಾರೂ ಚೈನೀಸ್ ಭಾಷೆಯನ್ನು ಮರೆತಿಲ್ಲ. ಅವರ ಮೊದಲ ಭಾಷೆ, ನಾಲಗೆ ಮೇಲೆ ಕುಣಿಯುವ ಭಾಷೆ ಚೈನೀಸ್. ಚೈನೀಸ್ ಅಥವಾ ಮಂಡಾರಿನ್ ಭಾಷೆ ಸಮಾಧಿ ಮೇಲೆ ಅವರು ವಿದೇಶಿ ಭಾಷಾ ಮಹಲುಗಳನ್ನು ಕಟ್ಟಿಕೊಂಡಿಲ್ಲ. ಚೈನೀಸ್ ಮತ್ತು ಮಂಡಾರಿನ್ ಜತೆ ಜತೆಗೆ ಕನಿಷ್ಠ ಎರಡು ವಿದೇಶಿ ಭಾಷೆಗಳನ್ನಾದರೂ ಕಲಿಯುತ್ತಿದ್ದಾರೆ. ಹೀಗಾಗಿ ಚೀನಾದವರು ಇಡೀ ಜಗತ್ತಿನಾದ್ಯಂತ ಇಂದು ತುಂಬಿಹೋಗಿದ್ದಾರೆ. ಬೆಂಗಳೂರಿನಲ್ಲಿ ಹುಟ್ಟಿ ಮಂಗಳೂರಿನಲ್ಲಿ ನೆಲೆಸಿದ ನಾವು ಜಪ್ಪಯ್ಯ ಅಂದರೂ ತುಳು ಕಲಿಯಲಿಕ್ಕಿಲ್ಲ. ಅದೇ ಚೀನಾದ ಆಸಾಮಿ ಮಲ್ಪೆಯಲ್ಲೋ, ಮುಲ್ಕಿಯಲ್ಲೋ, ತೆಕ್ಕೊಟ್ಟಿನಲ್ಲೋ ಎಂಟು ತಿಂಗಳು ಇದ್ದರೆ ತುಳು ಕಲಿಯದೇ ಹೋಗಲಾರ. ಆತ ಭಾಷೆಯೊಳಗೇನಿದೆ ಎಂದು ಮಸೂರ ಹುಡುಕಿ ಶೋಧಿಸಲಾರ. ಹೀಗಾಗಿ ಅವನಿಗೆ ಭಾಷೆಯೊಳಗೆ ಧರ್ಮ, ಕೋಮು, ಪ್ರಾಂತ, ವರ್ಗ, ಜಾತಿ, ನಾರಾಯಣ ಗೌಡ, ಪುಗಳೆಂದಿ, ತಮಿಳ್ ಮಕ್ಕಳ್ ಯಾರೂ ಕಾಣುವುದಿಲ್ಲ. ಅವನಿಗೆ ಭಾಷೆಯಲ್ಲಿರುವ ಅನುಕೂಲ, ಜ್ಞಾನ, ಸಂವಹನ ಗುಣ, ಪರಸ್ಪರ ವ್ಯವಹಾರ, ಗುಣಕಥನಗಳಷ್ಟೇ ಮುಖ್ಯ. ಭಾಷೆ ಯಾವತ್ತೂ ಜ್ಞಾನವನ್ನು ಹೆರುತ್ತದೆ. ಯಾವತ್ತೂ ಅದು ಮತ್ತಿನ್ನೇನನ್ನೋ ಹೇರುವುದಿಲ್ಲ. ಅವಿವೇಕಿಗಳಿಗೆ ಈ ಸಂಗತಿ ಗೊತ್ತಾಗುವುದಿಲ್ಲ. ಭಾಷಾ ಪ್ರೇಮದ ಅಂಧಾಭಿಮಾನದಲ್ಲಿ ತಾವೂ ದಾರಿ ತಪ್ಪುತ್ತಾರೆ. ಇತರರನ್ನೂ ದಾರಿ ತಪ್ಪಿಸುತ್ತಾರೆ. ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಭಾಷೆಗಳನ್ನು ನಿಮ್ಮ ಮೇಲೆ ಹೇರಿಕೊಂಡು ಕಲಿಯುವ ಪ್ರಯತ್ನ ಮಾಡಿ. ಹೊಸ ಹೊಸ ಭಾಷೆ ನಿಮ್ಮನ್ನು ಹೊಸ ಪ್ರಪಂಚ ದರ್ಶನ ಮಾಡಿಸುತ್ತದೆ. ನೀವು ಯಾವ ಭಾಷೆ ಕಲಿಯಬೇಕು ಎಂಬ ನಿರ್ಧಾರವನ್ನು ಹೋರಾಟಗಾರರಿಗೆ ಬಿಡಬೇಡಿ. ಜತೆಯಲ್ಲಿ ಮಾತ್ರ ಕನ್ನಡ ಇರಲಿ.

# ದೊಡ್ಡವರ ಮಕ್ಕಳಾಗಿ ಹುಟ್ಟುವುದು ಬಹಳ ಕಷ್ಟ

ಹಂತ ಹಂತಕ್ಕೂ ಅವರನ್ನು ಅವರ ಅಪ್ಪಂದಿರಿಗೆ ಹೋಲಿಸುತ್ತಾರೆ. ತಂದೆಯ ನೆರಳಿನಿಂದ ಹೊರಬರಲು ಅವರಿಗೆ ಸಾಧ್ಯವಾಗುವುದೇ ಇಲ್ಲ. ಮಕ್ಕಳ ಎಲ್ಲ ಸಾಧನೆಗೆ ಅವರ ತಂದೆಯೇ ಮಾಪಕವಾಗುತ್ತಾರೆ, ಅವರ ತಂದೆಯಾಗಿದ್ದರೆ ಈ ರೀತಿ ಮಾಡುತ್ತಿರಲಿಲ್ಲ ಎಂಬ ಹೋಲಿಕೆ ಶುರುವಾಗುತ್ತದೆ. ಕ್ರಮೇಣ ಮಕ್ಕಳಿಗೆ ತಂದೆ ಕೊಟ್ಟ ಹೆಸರು ಕಿರೀಟವಲ್ಲ, ಮಣಭಾರದ ಹೊರೆ ಎಂದೆನಿಸಲಾರಂಭಿಸುತ್ತದೆ.

**ನೂರೆಂಟು ವಿಶ್ವ**

**ವಿಶ್ವೇಶ್ವರ ಭಟ್**

vbhat@me.com

ಮೊನ್ನೆಮೊನ್ನೆಯಷ್ಟೇ ಅಪ್ಪಂದಿರ ದಿನ ಮುಗಿದಿದೆ. ಈ ವೇಳೆ ನನಗೆ ಕೆಲ ವರ್ಷದ ಹಿಂದೆ ಓದಿದ ಖ್ಯಾತ ಕ್ರಿಕೆಟ್ ಆಟಗಾರ, ನನ್ನ ನೆಚ್ಚಿನ ಸಂಭಾವಿತ ಕ್ರಿಕೆಟಿಗ ಸಂಜಯ ಮಂಜ್ರೇಕರ ಆತ್ಮಕತೆ ನೆನಪಾಯಿತು. ಬಹಳ ವಿಚಾರ ಮಾಡಿ, Imperfect (ಅಪರಿಪೂರ್ಣ) ಎಂಬ ಹೆಸರನ್ನು ಇದಕ್ಕೆ ಇಟ್ಟಿದ್ದಾರೆ. ಸಾಮಾನ್ಯವಾಗಿ ಆತ್ಮಕತೆಯಲ್ಲಿ ಆತ್ಮರತಿಯೇ ತುಂಬಿರುತ್ತದೆ. ಆದರೆ ಮಂಜ್ರೇಕರ ತಮ್ಮನ್ನು ಟೀಕಿಸುತ್ತಾ, ಗೇಲಿ ಮಾಡುತ್ತಾ, ತಮ್ಮ ಬಲೂನನ್ನು ತಾವೇ ಚುಚ್ಚಿಕೊಳ್ಳುತ್ತಾ, ತಮ್ಮೊಳಗಿನ ಖಾಲಿತನ ಅನಾವರಣಗೊಳಿಸುತ್ತಾ ಆಪ್ತರಾಗುತ್ತಾರೆ. ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರರೆಂದು ಮಾನ್ಯತೆ ಪಡೆದ ಮಂಜ್ರೇಕರ ಕ್ರಿಕೆಟ್ ಬಗ್ಗೆ ಇದಕ್ಕಿಂತ ಖಡಾಖಡಿ, ನೇರಾನೇರ ಹೇಳಲು ಸಾಧ್ಯವಿಲ್ಲ. 'ನನಗೆ ಕ್ರಿಕೆಟ್ ಅಂದ್ರೆ ಉಸಿರೂ ಅಲ್ಲ. ಜೀವನವೂ ಅಲ್ಲ. ನಾನು ಕೆಲವು ವರ್ಷ ಕ್ರಿಕೆಟ್ ಆಡಿದೆ ಅಷ್ಟೆ. ಹಾಗೆಂದ ಮಾತ್ರಕ್ಕೆ ನನಗೆ ಅದೇ ಸರ್ವಸ್ವ ಎಂದು ಭಾವಿಸಬೇಕಿಲ್ಲ. ಕ್ರಿಕೆಟ್ ನನಗೆ ಜೀವನವಲ್ಲ. ಕ್ರಿಕೆಟ್‌ಗಿಂತ ಮಿಗಿಲಾದುದು ಜೀವನ. ಕ್ರಿಕೆಟ್ ಹೊರಗೂ ಒಂದು ಅದ್ಭುತ ಜೀವನವಿದೆ ಎಂಬುದನ್ನು ಕಂಡುಕೊಂಡಿದ್ದೇನೆ. ಹೀಗಾಗಿ ಕ್ರಿಕೆಟ್‌ನಿಂದ ನಿವೃತ್ತನಾದ ನಂತರವೂ ಸಂತಸದ, ನೆಮ್ಮದಿಯ ಬದುಕು ಸಾಗಿಸುತ್ತಿದ್ದೇನೆ' ಎಂದು ಮುಕ್ತವಾಗಿ ಕ್ರಿಕೆಟ್ ಬಗ್ಗೆ ತಮ್ಮ ಅಭಿಪ್ರಾಯ ಹೇಳಿದ್ದಾರೆ.

ನಿಮಗೆ ಗೊತ್ತಿರಬಹುದು, ಸಂಜಯ ಮಂಜ್ರೇಕರ ಅವರ ತಂದೆ ವಿಜಯ್ ಮಂಜ್ರೇಕರ ಈ ದೇಶ ಕಂಡ ಅತ್ಯುತ್ತಮ ಬ್ಯಾಟ್ಸಮನ್‌ಗಳ ಪೈಕಿ ಒಬ್ಬರು. ಅವರು ಆಡಿದ್ದು ಕೇವಲ 53 ಟೆಸ್ಟ್‌ಗಳು ಮಾತ್ರ. ಈ ಪಂದ್ಯಗಳಲ್ಲಿ ಅವರು ಗಳಿಸಿದ ಒಟ್ಟೂ ರನ್ 3208. ಅಂದರೆ ಅವರ ರನ್ ಸರಾಸರಿ 39.12. ಅವರದು ಅತ್ಯಾಕರ್ಷಕ ಟೆಕ್ನಿಕ್.

ಈ ಆತ್ಮಕತೆಯಲ್ಲಿ ಸಂಜಯ ಮಂಜ್ರೇಕರ ಒಂದೆಡೆ, 'ನನ್ನ ಕ್ರಿಕೆಟ್ ಜೀವನಕ್ಕೆ ನನ್ನ ತಂದೆಯೇ ಮುಳುವಾದ. ಎಲ್ಲರೂ ನನ್ನನ್ನು ನನ್ನ ತಂದೆ ಜತೆ ಹೋಲಿಸುತ್ತಿದ್ದರು. ವಿಜಯ ಮಂಜ್ರೇಕರ ಹಾಗೆ ಆಡುತ್ತಿದ್ದರು, ಹೀಗೆ ಆಡುತ್ತಿದ್ದರು, ಅಂಥ ಬ್ಯಾಟ್ಸಮನ್ ಮತ್ತೊಮ್ಮೆ ಹುಟ್ಟಿಬರಲಾರ, ಕೋಟಿಗೊಬ್ಬ ವಿಜಯ ಮಂಜ್ರೇಕರ ಎಂದೆಲ್ಲ ಹೇಳಿ, ನನಗೆ ನಾನಾಗಲು ಬಿಡಲೇ ಇಲ್ಲ. ಮಂಜ್ರೇಕರ ಎಂಬ ಹೆಸರು ಕೇಳಿದರೆ ಸಾಕು, ತಂದೆ ಬಗ್ಗೆ ಎಲ್ಲರೂ ಕೊರೆಯುತ್ತಿದ್ದರು. ಅಂಥವರು, ಇಂಥವರು ಎಂದೆಲ್ಲ ಪ್ರಶಂಸಿಸುತ್ತಿದ್ದರು. ನನ್ನ ಪಾಲಿಗೆ ಈ ಮಂಜ್ರೇಕರ ಹೆಸರೇ ಭಾರವಾಯಿತು. ನನಗೆ ಅಪ್ಪನಿಂದ ಹೊರತಾದ ಜೀವನ ರೂಪಿಸಿಕೊಳ್ಳಲು ಬಹಳ ಕಷ್ಟವಾಯಿತು. ನನಗೆ ನನ್ನ ಅಪ್ಪ ದೊಡ್ಡ ಕ್ರಿಕೆಟ್ ಆಟಗಾರರೆಂಬುದು ಗೊತ್ತಿರಲಿಲ್ಲ. ಅಲ್ಲದೇ 'ಮಂಜ್ರೇಕರ' ಎಂಬ ಅಡ್ಡ ಹೆಸರಿನ ಬಗ್ಗೆ ಕೂಡ ವಿಶೇಷ ಪ್ರೀತಿಯಾಗಲಿ, ಜಾಗೃತಿಯಾಗಿರಲಿ ಇರಲಿಲ್ಲ. ನಾನು ಕ್ರಿಕೆಟ್ ಆಡುವ ಹೊತ್ತಿಗೆ ಅವರು ನಿವೃತ್ತರಾಗಿದ್ದರು. ವಿಜಯ ಮಂಜ್ರೇಕರ ಮಗ ಎಂಬ ಕಾರಣಕ್ಕೆ ನನಗೆ ವಿಶೇಷ ಮರ್ಯಾದೆ ನೀಡಿದರೆ ಆಗುತ್ತಿರಲಿಲ್ಲ. 'ಅಪ್ಪನ ಮುಖ ನೋಡಿ ಮಣೆ ಹಾಕಬೇಡಿ' ಎಂದು ಮುಲಾಜಿಲ್ಲದೇ ಹೇಳುತ್ತಿದ್ದರು. ಈಗ ಯಾರಾದರೂ ಅವರ ತಂದೆ ಬಗ್ಗೆ ಪ್ರಶ್ನಿಸಿದರೆ, 'ಹೌದು, ನನ್ನ ತಂದೆ ಕ್ರಿಕೆಟರ್ ಎಂಬುದಷ್ಟೇ ಗೊತ್ತು. ಅವರ ಬಗ್ಗೆ ನನಗಿಂತ ಬೇರೆಯವರಿಗೇ ಜಾಸ್ತಿ ಗೊತ್ತು' ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಾರೆ. ಹಾಗಂತ ತಂದೆ ಬಗ್ಗೆ ಯಾವುದೇ ತಕರಾರಿಲ್ಲ, ಆದರೆ ಅವರೊಬ್ಬ ಮಹಾನ್ ಕ್ರಿಕೆಟರ್ ಹಾಗೂ ತಾನು ಅವರ ಮಗ ಎಂಬ ಕಾರಣಕ್ಕೆ ಎಲ್ಲಿಲ್ಲದ ಸ್ಕೋಪು ಹಾಗೂ ಮಾವಿನ ತೋರಣ ಸಿಕ್ಕಿಸಿಕೊಳ್ಳಬಾರದು ಎಂಬುದು ಅವರ ನಿಲುವು. ' ಒಂದು ವೇಳೆ ಮಂಜ್ರೇಕರ ಅವರ ಮಗ ಆಗದಿದ್ದರೆ ಅಥವಾ ಮಂಜ್ರೇಕರ ಎಂಬ ಅಡ್ಡ ಹೆಸರು ಅಂಟಿಕೊಳ್ಳದಿದ್ದರೆ, ನನ್ನ ಬದುಕಿನ ಗತಿ ಇದಕ್ಕಿಂತ ಚೆನ್ನಾಗಿರುತ್ತಿತ್ತೋ ಇಲ್ಲವೋ ಗೊತ್ತಿಲ್ಲ . ಆದರೆ ಹೀಗಂತೂ ಇರದೇ, ಇನ್ನೂ ಭಿನ್ನವಾಗಿರುತ್ತಿತ್ತು' ಎಂದು ಬರೆದುಕೊಂಡಿದ್ದಾರೆ.

ಅಪ್ಪನ ಹೆಸರಿನ ಅಡಿಯಲ್ಲಿ ಬೆಳೆಯೋದು ಬಹಳ ಕಷ್ಟ. ಶ್ರೀಮಂತ, ಜನಪ್ರಿಯ, ಪ್ರಸಿದ್ಧ ಅಪ್ಪನ ಮಗನಾಗಿ ಸ್ವಂತ ವ್ಯಕ್ತಿತ್ವ ರೂಪಿಸಿಕೊಳ್ಳುವುದು ಸುಲಭವಲ್ಲ. ಹೆಜ್ಜೆ ಹೆಜ್ಜೆಗೆ ಜನ ನಿಮ್ಮನ್ನು ಗುರುತಿಸುತ್ತಾರೆ. ನಿಮ್ಮನ್ನು ನಿಮ್ಮ ತಂದೆಯ ಜತೆ ಹೋಲಿಸುತ್ತಾರೆ. ಅವರು ಪ್ರತಿಪಾದಿಸಿದ ವಿಚಾರಧಾರೆಗಳನ್ನು ನೀವು ಪಾಲಿಸಬೇಕೆಂದು ಜನ ಬಯಸುತ್ತಾರೆ. ಅವರಿಗಿಂತ ತುಸು ಭಿನ್ನಹಾದಿ ತುಳಿದರೆ, ತಂದೆಯ ವಿರುದ್ಧ ತಿರುಗಿ ಬಿದ್ದವ, ಬಂಡಾಯ ಬಾವುಟ ಹಾರಿಸಿದವ ಎಂದೆಲ್ಲ ಹಣೆಪಟ್ಟಿ ಅಂಟಿಸಿ ಬಿಡುತ್ತಾರೆ.



ಎಂಥ ವಿಚಿತ್ರವೆಂದರೆ, ನಿಮ್ಮ ತಂದೆ ಸಸ್ಯಾಹಾರಿ ಪ್ರತಿಪಾದಕರಾದರೆ, ನಿಮಗೆ ಅವರ ವಿಚಾರ, ಹೋರಾಟ ಹಾಗೂ ಸಿದ್ಧಾಂತಗಳು ಇಷ್ಟವಾಗುವುದೋ, ಇಲ್ಲವೋ, ನೀವು ಅವರ ತತ್ತ್ವವನ್ನು ಒಪ್ಪಿಕೊಳ್ಳಬೇಕು. ಒಂದು ವೇಳೆ ನೀವು ಅವರ ಸಿದ್ಧಾಂತವನ್ನು ಪ್ರಶ್ನಿಸಿದರೆ ಅಥವಾ ಮಾಂಸಾಹಾರ ಪ್ರತಿಪಾದಕರಾದರೆ, ಮುಗಿದೇ ಹೋಯಿತು. 'ಎಂಥವರ ಹೊಟ್ಟೆಯಲ್ಲಿ ಎಂಥ ಚಾಂಡಾಳ ಹುಟ್ಟಿದ್ದಾನೆ ? ತಂದೆಗೇ ಸೆಡ್ಡು ಹೊಡೆಯುವಷ್ಟು ಅಧಿಕಪ್ರಸಂಗತನವಾ? ತಂದೆಯನ್ನೇ ಧಿಕ್ಕರಿಸಿದ ಮಗ' ಎಂದೆಲ್ಲ ಹೋದಲ್ಲಿ ಬಂದಲ್ಲಿ ಹಳಿಯುತ್ತಾರೆ, ಚುಚ್ಚುಮಾತುಗಳನ್ನು ಹೇಳುತ್ತಾರೆ. ತಂದೆಯ ವಿಚಾರಗಳನ್ನು ಕುರುಡಾಗಿ ಅನುಸರಿಸಬೇಕು. ಸ್ವಲ್ಪ ಪ್ರಶ್ನಿಸಿದರೂ ಟೀಕೆ ತಪ್ಪಿದ್ದಲ್ಲ. ತಂದೆ ಕಾಂಗ್ರೆಸ್ ಪಕ್ಷದಲ್ಲಿದ್ದರೆ, ಮಗನೂ ಅದೇ ಪಕ್ಷದಲ್ಲಿರಬೇಕು, ಆತನಿಗೆ ಆ ಪಕ್ಷದ ಸಿದ್ಧಾಂತಗಳಲ್ಲಿ ನಂಬಿಕೆ ಇಲ್ಲದಿದ್ದರೂ ! ಇಲ್ಲದಿದ್ದರೆ ಅಪ್ಪ-ಮಗನಿಗೆ ಸರಿಯಿಲ್ಲ, ಸದಾ ವಾದ-ವಿವಾದದಲ್ಲೇ ಮುಳುಗುತ್ತಾರೆ ಎಂದೆಲ್ಲ ಸುದ್ದಿ ಹಬ್ಬಿಸುತ್ತಾರೆ.

ಸಂಜಯ ಮಂಜ್ರೇಕರ ಸೆಂಚುರಿ ಹೊಡೆದಾಗ, 'ವಿಜಯ ಮಂಜ್ರೇಕರ ಸಹ ಇದೇ ರೀತಿ, ಇದೇ ಮೈದಾನದಲ್ಲಿ ಸೆಂಚುರಿ ಹೊಡೆದಿದ್ದರು' ಎಂದು ಬರೆದಿದ್ದರಂತೆ. ಅವರು ಔಟಾದಾಗಲೂ, ಅಪ್ಪನ ಥರಾನೇ ಸ್ಟೈಲಿಶ್ ಬ್ಯಾಟ್ಸಮನ್ ಎಂದು ವೀಕ್ಷಕ ವಿವರಣಕಾರರು ಕಾಮೆಂಟ್ ಮಾಡುತ್ತಿದ್ದರಂತೆ. 'ನಾನು ನನ್ನ ತಂದೆಯವರು ಕ್ರಿಕೆಟ್ ಆಡಿದ್ದನ್ನೇ ನೋಡಿಲ್ಲ. ನಾವು ಆಡುವ ಹೊತ್ತಿಗೆ ಅವರು ರಿಟೈರ್ ಆಗಿ ಎಷ್ಟೋ ವರ್ಷಗಳಾಗಿದ್ದವು. ನಾನು ಕ್ರಿಕೆಟ್ ಆಡುವುದು ಅವರಿಗೆ ಗೊತ್ತೇ ಇರಲಿಲ್ಲ. ನಾನು ಅಂತಾರಾಷ್ಟ್ರೀಯ ಕ್ರಿಕೆಟ್ ಆಡುವ ಹೊತ್ತಿಗೆ ಅವರು ನಿಧನರಾಗಿದ್ದರು. ನನ್ನ ತಂದೆ ಗ್ರೇಟ್ ಕ್ರಿಕೆಟರ್ ಆಗಿರಬಹುದು. ಆದರೆ ನನ್ನ ಕ್ರಿಕೆಟ್ ಜೀವನದಲ್ಲಿ ಅವರ ಕೊಡುಗೆ ಏನೂ ಇಲ್ಲ. ಅವರ ರಕ್ತವನ್ನು ನಾನು ಹಂಚಿಕೊಂಡಿದ್ದೇನೆ ಎಂಬುದನ್ನು ಬಿಟ್ಟರೆ. ಆದರೆ ಅವರ ಸರ್ ನೇಮ್ ಇದೆಯಲ್ಲ, ಅದೇ ನನಗೆ ಹೊರೆಯಾಯಿತು. ನನಗೆ ನಾನಾಗಿ ಬೆಳೆಯಲು, ವ್ಯಕ್ತಿತ್ವ ರೂಪಿಸಿಕೊಳ್ಳಲು ಆಗಲೇ ಇಲ್ಲ. ನನ್ನ ಸಾಧನೆಗೆ ಎಷ್ಟೆಂದರೂ ಯಾರ ಮಗ ಅನ್ನೋರು. ಡಬಲ್ ಸೆಂಚುರಿ ಹೊಡೆದಾಗ ವಿಜಯ ಮಂಜ್ರೇಕರ ಅಪರಾವತರ ಅನ್ನೋರು. ನಾನು ಟೆಸ್ಟ್‌ಗೆ ಪದಾರ್ಪಣೆ ಮಾಡಿದಾಗ, ಕ್ರಿಕೆಟ್ ಆಟಗಾರನ ಹೊಟ್ಟೆಯಲ್ಲಿ ಟೆನಿಸ್‌ಪಟು ಹುಟ್ಟುವುದಿಲ್ಲ ಎಂದು ಬರೆದಿದ್ದರು' ಎಂದು ಸೆಲಬ್ರಿಟಿ ತಂದೆಯ ಮಗನಾಗಿ ಹುಟ್ಟುವುದರ ತಾಪತ್ರಯಗಳ ಬಗ್ಗೆ ಸಂಜಯ್ ಮಂಜ್ರೇಕರ ನಿರ್ದಾಕ್ಷಿಣ್ಯವಾಗಿ ಹೇಳಿಕೊಂಡಿದ್ದಾರೆ.

ಇಂಥದೇ ಮಾತುಗಳನ್ನು ಹಿಂದಿ ಚಿತ್ರ ನಟ ಅಮಿತಾಬ್ ಬಚ್ಚನ್ ಸಹ ಹೇಳಿಕೊಂಡಿದ್ದಾರೆ. ಅವರ ತಂದೆ ಹರಿವಂಶ ರಾಯ್ ಬಚ್ಚನ್ ಹಿಂದಿ ಸಾಹಿತ್ಯದ ಮೇರು ಕವಿ, ಸಾಹಿತಿ. ಹಿಂದಿ ಕವಿ ಸಮ್ಮೇಳನಗಳು ಅವರಿಲ್ಲದೇ ನಡೆಯುತ್ತಿರಲಿಲ್ಲ. ಸರಕಾರದ ಮೇಲೆ ಪ್ರಭಾವ ಬೀರುವಂಥ ವರ್ಚಸ್ಸು ಅವರಿಗಿತ್ತು. ಅವರು ಬರೆದಿದ್ದನ್ನು ವಿಮರ್ಶಕರು ಗಂಭೀರವಾಗಿ ಪರಿಗಣಿಸುತ್ತಿದ್ದರು. ಅಲ್ಲದೇ ಹರಿವಂಶರಾಯರು ಹಿಂದಿ ಭಾಷಿಕರಲ್ಲಿ ಪ್ರತಿಷ್ಠಿತರೆಂದು ಮನ್ನಣೆ ಗಳಿಸಿದ್ದರು. ಇಂಥವರ ಮಗ ಹಿಂದಿ ಚಿತ್ರರಂಗ ಪ್ರವೇಶಿಸಿದಾಗ, 'ಕವಿಶ್ರೇಷ್ಠರ ಮಗ ಬಣ್ಣಹಚ್ಚಿ ಸಿನಿಮಾ ನಟನಾಗಲು ಹವಣಿಸುತ್ತಿದ್ದಾನೆ' ಎಂದು ಬರೆದಿದ್ದರಂತೆ. ಅಮಿತಾಬ್ ಅವರನ್ನು ಹಿಂದಿ ಚಿತ್ರರಂಗದ ಮಂದಿ 'ನೀವು ಹರಿವಂಶರಾಯರ ಮಗನಾ? ನಿಮ್ಮ ತಂದೆ ಮಹಾನ್ ಕವಿ. ಅವರ ಮಗನಾಗಿ ಈ ನಟನೆಯೆಲ್ಲ ಯಾಕೆ? ಅವರಂತೆ ನೀವೂ ಸಾಹಿತಿ ಆಗಬಹುದಲ್ಲ? ಈ ಬಣ್ಣದ ಬದುಕು ಬೇಕಾ? ಸಾಹಿತಿಗಿರುವ ಗೌರವವೇ ಬೇರೆ. ಇಂಥವರ ಹೊಟ್ಟೆಯಲ್ಲಿ ಹುಟ್ಟಿದವರಾಗಿ ಈ ವೇಷ ಬಿಟ್ಟುಬಿಡಿ' ಎಂದು ಹೇಳುತ್ತಿದ್ದರಂತೆ. ಸಿನಿಮಾರಂಗ ಸೇರಿ ಐದಾರು ವರ್ಷಗಳಾದರೂ ಈ ರೀತಿಯ ಪ್ರಶ್ನೆಗಳನ್ನು ಬಚ್ಚನ್ ಎದುರಿಸಿದರು. ಬಚ್ಚನ್ ಎಂಬ ಹೆಸರು ಕೇಳುತ್ತಿದ್ದಂತೆ, 'ನೀವು ಹರಿವಂಶರಾಯ ಬಚ್ಚನ್‌ಗೆ ಏನಾಗಬೇಕು? ನೀವು ಅವರ ಮಗನಾ? ನೀವೇಕೆ ಈ ರಂಗಕ್ಕೆ ಬಂದಿರಿ? ನೀವೇಕೆ ತಂದೆಯಂತೆ ಸಾಹಿತಿಯಾಗಲಿಲ್ಲ, ಕವಿಯಾಗಲಿಲ್ಲ?' ಎಂದು ಕೇಳುತ್ತಿದ್ದರು. ಅಮಿತಾಬ್‌ಗೆ ಈ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾಗುತ್ತಿತ್ತು. ಆದರೆ ಅವರು ತಂದೆಯ ವೃತ್ತಿಯನ್ನು ಹಿಡಿಯಲಿಲ್ಲ.

ಮಂಜ್ರೇಕರ ಬರೆಯುತ್ತಾರೆ-'ಪಿತೃವಾಕ್ಯಪರಿಪಾಲಕನಾದ ರಾಮನೂ ಇದ್ದಾನೆ. ತಂದೆಯ ಆದೇಶ ಧಿಕ್ಕರಿಸಿದ ಪ್ರಹ್ಲಾದನೂ ಇದ್ದಾನೆ. ತಂದೆಯ ಹಾದಿ ತುಳಿಯದಿರುವುದನ್ನು ಅಪರಾಧ ಎಂಬ ಭಾವನೆ ಈಗಲೂ ಕೆಲವರಲ್ಲಿದೆ. ಸೆಲಬ್ರಿಟಿ ತಂದೆಯ ಮಗನಾಗಿ ಹುಟ್ಟಿದರೆ, ಕೆಲವೊಂದು ಲಾಭಗಳಿವೆ. ಹಾಗೆಯೇ ಅದರ ಜತೆಗೇ ಒಂದಷ್ಟು ಬ್ಯಾಗೇಜ್‌ಗಳನ್ನೂ ಹೊತ್ತುಕೊಳ್ಳಲು ಸಿದ್ಧರಿರಬೇಕು. ಬಹುತೇಕ ಅತಿಗಣ್ಯರ ಮಕ್ಕಳು ಅಪ್ಪಂದಿರ ಪ್ರಖ್ಯಾತಿ, ಜನಪ್ರಿಯತೆ ಹೊತ್ತುಕೊಳ್ಳಲಾಗದೇ ಕುಸಿದುಹೋಗುತ್ತಾರೆ. ಅದೇ ಅವರಿಗೆ ಮುಳುವಾಗುತ್ತದೆ.'

ಸಚಿನ್ ತೆಂಡುಲ್ಕರ್, ಸುನಿಲ್ ಗಾವಸ್ಕರ್ ಮುಂತಾದ ಕ್ರಿಕೆಟ್ ಆಟಗಾರರ ಮಕ್ಕಳಾಗುವುದು ಬಹಳ ಕಷ್ಟ. ಪ್ರತಿಸಲ ಖ್ಯಾತ ಕ್ರಿಕೆಟ್ ಆಟಗಾರರ ಮಕ್ಕಳಾದವರು ಫೀಲ್ಡ್‌ಗೆ ಇಳಿದಾಗ, ಅವರ ಅಪ್ಪಂದಿರಿಗಿಂತ ಚೆನ್ನಾಗಿ ಆಡಬೇಕೆಂದು ನಿರೀಕ್ಷಿಸುತ್ತಾರೆ. ಹಂತ ಹಂತಕ್ಕೂ ಅವರನ್ನು ಅವರ ಅಪ್ಪಂದಿರಿಗೆ ಹೋಲಿಸುತ್ತಾರೆ. ತಂದೆಯ ನೆರಳಿನಿಂದ ಹೊರಬರಲು ಅವರಿಗೆ ಸಾಧ್ಯವಾಗುವುದೇ ಇಲ್ಲ. ಮಕ್ಕಳ ಎಲ್ಲ ಸಾಧನೆಗೆ ಅವರ ತಂದೆಯೇ ಮಾಪಕವಾಗುತ್ತಾರೆ, ಅವರ ತಂದೆಯಾಗಿದ್ದರೆ ಈ ರೀತಿ ಮಾಡುತ್ತಿರಲಿಲ್ಲ ಎಂಬ ಹೋಲಿಕೆ ಶುರುವಾಗುತ್ತದೆ. ಕ್ರಮೇಣ ಮಕ್ಕಳಿಗೆ ತಂದೆ ಕೊಟ್ಟ ಹೆಸರು ಕಿರೀಟವಲ್ಲ, ಮಣಭಾರದ ಹೊರೆ ಎಂದೆನಿಸಲಾರಂಭಿಸುತ್ತದೆ.

ನನಗೆ ಇಲ್ಲಿ ನೆನಪಾಗುವುದು ಮಹಾತ್ಮಾ ಗಾಂಧಿ ಮಗ ಹರಿಲಾಲ ಗಾಂಧಿ. ಬಹುಶಃ ನಮ್ಮ ದೇಶದಲ್ಲಿ ಗಾಂಧೀಜಿ ಹೆಸರನ್ನು ಕೇಳದವರಿಲ್ಲ. ಅದಕ್ಕಿಂತ ಪರಿಚಿತ ಹಾಗೂ ದೊಡ್ಡದಾದ ಅಡ್ಡಹೆಸರೂ ಇರಲಿಕ್ಕಿಲ್ಲ. ಗಾಂಧೀಜಿ ಹಾಗೂ ಗಾಂಧಿ ಎಂಬುದು ಮನೆಮಾತು. ಗಾಂಧೀಜಿಯವರು ಕೇವಲ ಒಬ್ಬ ವ್ಯಕ್ತಿ ಅಲ್ಲ. ಅವರೊಂದು ಆದರ್ಶ. ನುಡಿದಂತೆ ನಡೆದವರು. ಈ ದೇಶದಲ್ಲಿ ಹಲವಾರು ರಾಷ್ಟ್ರಪತಿಗಳಾಗಿ ಹೋಗಿದ್ದಾರೆ. 'ರಾಷ್ಟ್ರಪಿತ' ಅವರೊಬ್ಬರೇ! ಅಂಥ ರಾಷ್ಟ್ರಪಿತನ ನಾಲ್ವರು ಗಂಡು ಮಕ್ಕಳಲ್ಲಿ ಜ್ಯೇಷ್ಠಪುತ್ರನೇ ಹರಿಲಾಲ. ಓದು, ಬರಹದಲ್ಲಿ ಬುದ್ಧಿವಂತ. ಗಾಂಧೀಜಿ ಹೆಸರು ಇಡೀ ದೇಶವನ್ನು ವ್ಯಾಪಿಸಿದ ಸಂದರ್ಭದಲ್ಲಿ ಹರಿಲಾಲ ತನ್ನ ಬದುಕು ಕಟ್ಟಿಕೊಳ್ಳಲು ನೋಡುತ್ತಿದ್ದ. ಎಲ್ಲ ಕಡೆಗಳಲ್ಲೂ ಗಾಂಧಿಮಂತ್ರ. ಸ್ವಾಭಾವಿಕವಾಗಿ ಗಾಂಧಿ ಮಕ್ಕಳೆಂಬ ಕಾರಣ ದಿಂದ ಹರಿಲಾಲನಿಗೆ ಎಲ್ಲೆಡೆ ಪ್ರಾಮುಖ್ಯ ಸಿಗುತ್ತಿತ್ತು. ಹರಿಲಾಲನೂ ಗಾಂಧಿಯಂತೆ ಕಠೋರವಾದಿ. ತನ್ನ ತಂದೆ ವಿರುದ್ಧವೇ ಮಾತಾಡಲಾರಂಭಿಸಿದ! ತಂದೆಯ ತಪ್ಪುಗಳನ್ನೇ ಎತ್ತಿ ತೋರಿಸಲಾರಂಭಿಸಿದ. ಸಹಜವಾಗಿ ಈ ಮಾತುಗಳಿಗೆ ಪ್ರಾಮುಖ್ಯ ಸಿಗಲಾರಂಭಿಸಿತು. ಗಾಂಧಿ ಮಗನ ಬಾಯಲ್ಲಿ ಇಂಥ ಮಾತುಗಳಾ ಎಂದು ಜನ ಕೇಳಲಾರಂಭಿಸಿದರು. ತನ್ನ ತಂದೆಯಂತೆ ಜನಪ್ರಿಯನಾಗಬೇಕೆಂದರೆ ಅವನ ವಿರುದ್ಧವೇ ಮಾತಾಡಬೇಕು, ಆಗ ದಿಢೀರ್ ಪ್ರಸಿದ್ಧನಾಗಬಹುದೆಂದು ಅವನಿಗೆ ಅನಿಸಲಾರಂಭಿಸಿತು. ಹೀಗಾಗಿ ಅಪ್ಪನ ವಿರುದ್ಧ ಭಾಷಣ ಮಾಡಲಾರಂಭಿಸಿದ. ಗಾಂಧಿ ತತ್ತ್ವಗಳನ್ನು ವಿರೋಧಿಸಿದರೆ, ಅದನ್ನೂ ಇಷ್ಟಪಡುವವರ ದೊಡ್ಡ ಗುಂಪಿದೆ ಎಂಬುದು ಅವನಿಗೆ ಮನದಟ್ಟಾಯಿತು.

ಹೀಗಾಗಿ ಗಾಂಧಿ ತತ್ತ್ವಗಳ ವಿರುದ್ಧ ಪ್ರತಿಪಾದಿಸಲಾರಂಭಿಸಿದ. ಪರಿಣಾಮವಾಗಿ ಕುಡಿಯಲಾರಂಭಿಸಿದ. ಕುಡಿದು ಕುಡಿದು ರಸ್ತೆಯಲ್ಲಿ ಬಿದ್ದ. ಅದು ಪತ್ರಿಕೆಗಳಲ್ಲಿ ಪ್ರಕಟವಾಗಿ ದೊಡ್ಡ ಸುದ್ದಿಯಾಗಿ ಗಾಂಧೀಜಿಗೆ ಭಾರೀ ಮುಖಭಂಗವಾಯಿತು. ಸಾರ್ವಜನಿಕವಾಗಿ ಕುಡಿದು ಅನುಚಿತವಾಗಿ ವರ್ತಿಸಿದ ಆಪಾದನೆ ವಿರುದ್ಧ ಕೋರ್ಟ್ ಹರಿಲಾಲನಿಗೆ ದಂಡ ವಿಧಿಸಿತು. ಹರಿಲಾಲ ತನ್ನ ತಂದೆಯ ವಿರೋಧಿಗಳಿಗೆ 'ದಾಳ'ವಾದ. ತನ್ನ ತಂದೆಯ ಮನಸ್ಸಿಗೆ ವಿರುದ್ಧವಾಗಿ ನಡೆದುಕೊಳ್ಳಲಾರಂಭಿಸಿದ. ವೇಶ್ಯೆಯರ ಸಂಗಕ್ಕೆ ಬಿದ್ದ. ಇಸ್ಲಾಮಿಗೆ ಮತಾಂತರವಾಗಿ 'ಅಬ್ದುಲ್ಲಾ ಗಾಂಧಿ' ಆದ. ಗಾಂಧಿ ಹೆಸರು ಬಳಸಿಕೊಂಡು ಉದ್ಯಮಿಗಳು, ಶ್ರೀಮಂತರಿಂದ ಹಫ್ತಾ ವಸೂಲಿ ಮಾಡಲಾರಂಭಿಸಿದ. ಗಾಂಧೀಜಿಯವರಂತೆ ಹೆಸರು ಮಾಡಲಾಗಲಿಲ್ಲ. ಅವರ ಚಿಂತನೆಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಜನಪ್ರಿಯನಾಗಬಹುದು ಎಂಬುದು ಅವನಿಗೆ ಅನಿಸಿದ್ದರಿಂದ ಅವರು ಪ್ರತಿಪಾದಿಸುವ ಎಲ್ಲ ತತ್ತ್ವ, ಆದರ್ಶಗಳಿಗೆ ಪ್ರತಿಯಾಗಿ ವರ್ತಿಸಲಾರಂಭಿಸಿದ. ಗಾಂಧಿ ಒಂದು ದಿಕ್ಕಾದರೆ, ಹರಿಲಾಲನೇ ಮತ್ತೊಂದು. ಗಾಂಧಿ ಎಂಬ ಹೆಸರೇ ಅವನಿಗೆ ಮುಳುವಾಯಿತು. ಆ ಹೆಸರಿನ ಭಾರದಲ್ಲೇ ಆತ ಜರ್ಝರಿತನಾದ.

ದೊಡ್ಡವರ ಮಕ್ಕಳಾಗಿ ಹುಟ್ಟುವುದು ಬಹಳ ಕಷ್ಟ. ತಂದೆಯ ನೆರಳು ಕತ್ತಲಾಗಿ ಕಾಡಬಹುದು. ತಂದೆಯ ವಿಖ್ಯಾತಿಯೇ ವಿಷವಾಗಬಹುದು. ಸಂಜಯ ಮಂಜ್ರೇಕರ ಎಲ್ಲ ಸಾಮರ್ಥ್ಯ, ಅರ್ಹತೆಗಳಿದ್ದೂ ಅಪರಿಪೂರ್ಣ ಆಟಗಾರನಾಗಿಯೇ ಉಳಿದು ಬಿಟ್ಟ. ಅವನ ಕ್ರಿಕೆಟ್ ವೃತ್ತಿ ಜೀವನ ಹಠಾತ್ ಕೊನೆಗೊಂಡಿತು.

# ಕೆಚ್ಚಿಲ್ಲದ ಹೋರಾಟಗಳಿಂದ ಬರೀ ಕಿಚ್ಚು!

ಭಾರತ ಮೊದಲಿನ ಸ್ಥಿತಿಯಲ್ಲಿಲ್ಲ. ಲಕ್ಷಾಂತರ ಕೋಟಿ ಹೂಡಿಕೆ ಭಾರತವನ್ನು ಹುಡುಕಿಕೊಂಡು ಬರುತ್ತಿದೆ. ವಿಶ್ವದ ಅತಿದೊಡ್ಡ ಮಾರುಕಟ್ಟೆಯೂ ಭಾರತವೇ ಆಗಿದೆ. 2021-2022ರಲ್ಲಿ ನಮ್ಮ ದೇಶಕ್ಕೆ 83.57 ಬಿಲಿಯನ್ ಡಾಲರ್ ಹೂಡಿಕೆ ಬಂದಿದೆ.

**ಅಭಿವ್ಯಕ್ತಿ**

**ವಿನಯ್ ಖಾನ್**

vinaykhan078@gmail.com

ಮೊನ್ನೆ ನರೇಂದ್ರ ಮೋದಿಯವರು ಕರ್ನಾಟಕಕ್ಕೆ ಬಂದಾಗ ಕೆಲವೊಂದಿಷ್ಟು ಜನ ಹಿಂದಿ ಹೇರಿಕೆಯ ವಿರುದ್ಧ ಪ್ರತಿಭಟನೆ ಮಾಡಿದರು. ಈ ಪ್ರತಿಭಟನೆಗಳೂ ಪ್ರಜಾಪ್ರಭುತ್ವದ ಒಂದು ಅಂಗವೇ. ಹಾಗೆ ನೋಡಿದರೆ ನಮಗೆ ಸ್ವಾತಂತ್ರ್ಯ ಬಂದಿದ್ದೇ ಪ್ರತಿಭಟನೆಗಳ ಮೂಲಕ. ನಮ್ಮ ದೇಶದ ನಾಯಕರುಗಳೆಲ್ಲರೂ ಬೆಳೆದಿದ್ದು ಪ್ರತಿಭಟನೆಗಳ ಮೂಲಕವೇ, ಅದು ಗಾಂಧಿ, ನೆಹರೂ, ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್, ವೀರ ಸಾವರ್ಕರ್... ಕೊನೆಗೆ ನರೇಂದ್ರ ಮೋದಿಯವರು ನಾಯಕರಾಗಿ ಹೊರಹೊಮ್ಮಿದ್ದೂ ಹೋರಾಟಗಳಲ್ಲೇ. ಇವರುಗಳೆಲ್ಲವೂ ಗುರುತಿಸಿಕೊಂಡಿದ್ದು ಪ್ರತಿಭಟನೆಗಳ ಮೂಲಕವೇ.

ದೇಶ ಅಂದಿನಿಂದ ಇಂದಿನವರೆಗೆ ಹಲವಾರು ಪ್ರತಿಭಟನೆಗಳನ್ನು ನೋಡಿದೆ, ಸಹಕರಿಸಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧಿಯವರ ಮಾತಿಗೆ ದೇಶದ ಕೋಟ್ಯಂತರ ಜನ ಬೀದಿಗಿಳಿದು ಬ್ರಿಟಿಷರ ವಿರುದ್ಧ ರಣಕಹಳೆಯನ್ನೂದಿದ್ದನ್ನು ಕೇಳಿದ್ದೇವೆ. ಸುಭಾಷ್ ಚಂದ್ರ ಬೋಸರ ಕರೆಗೆ ಓಗೊಟ್ಟು ಲಕ್ಷಾಂತರ ಜನ ತಮ್ಮ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿ ಬಂದಿದ್ದರು. ಆ ಕಾಲದ ಹೋರಾಟಗಳಿಗೆ ಒಂದು ಧ್ಯೇಯವಿತ್ತು. ನಿಸ್ವಾರ್ಥ ಭಾವನೆಯಿತ್ತು, ಭಾರತವನ್ನು ಸ್ವತಂತ್ರಗೊಳಿಸಿಯೇ ತೀರುತ್ತೇವೆ ಎನ್ನುವ ಛಲ-ಬದ್ಧತೆಯಿತ್ತು. ಅದೇ ರೀತಿ ರಾಮ ಮಂದಿರಕ್ಕಾಗಿನ ಪ್ರತಿಭಟನೆ ಇರಬಹುದು, ಎಮರ್ಜನ್ಸಿ ಕಾಲದ ಹೋರಾಟಗಳು ಇರಬಹುದು. ಇವೆಲ್ಲ ಹೋರಾಟಗಳು ಒಂದು ಕಾಲಘಟ್ಟದಲ್ಲಿ ಮಾಡಲೇ ಬೇಕಾದ ಸನ್ನಿವೇಶದಲ್ಲಿ ರೂಪುಗೊಂಡವು. ಇಂದಿಗೂ ಇದೆ, ಇವತ್ತಿಗೂ ಹೋರಾಟಗಳು ನಡೆಯುತ್ತಿವೆ, ಆದರೆ ಏಕೆ?

ಹೇಳಬೇಕೆಂದರೆ, ಇವತ್ತಿನ ದಿನಮಾನದ ಹೋರಾಟಗಳೆಲ್ಲವೂ 'ವಿರೋಧ' ಪಕ್ಷ ಪ್ರೇರಿತ, ಆಡಳಿತಾರೂಢರ ವಿರುದ್ಧವೇ; ರಾಜಕೀಯ ಪ್ರೇರಿತವೇ. ಬೆಲೆ ಏರಿಕೆಯಿಂದ ಆರಂಭಿಸಿ, ಇಡಿ ವಿಚಾರಣೆಗೆ ವಿರೋಧದವರೆಗೆ ಎಲ್ಲದಕ್ಕೂ ಪ್ರತಿಭಟನೆಗಳೇ. ಇನ್ನೂ ವಿಶೇಷವೆಂದರೆ ಹೀಗೆ ದೇಶದ ಆಂತರಿಕವಾಗಿ ಪ್ರಜೆಗಳು ಎತ್ತುವ ದನಿಗೆ ಇದ್ದಕ್ಕಿದ್ದಂತೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಬಲ, ಅಂತಾರಾಷ್ಟ್ರೀಯ ಮೀಡಿಯಾಗಳಲ್ಲೂ ಅದೇ ಸುದ್ದಿ!

ಯಾವುದೇ ಪಕ್ಷ ಅಥವಾ ಸಂಘಟನೆ ಯಾವುದೋ ಹೋರಾಟ, ಆಗ್ರಹ ಮಾಡಲಿ, ಉಗ್ರ ಹೋರಾಟ ರೂಪಿಸಲಿ. ಆದರೆ ಎಲ್ಲ ಹೋರಾಟಗಳೂ ಗಲಭೆ, ಹಿಂಸಾಚಾರದ ಸ್ವರೂಪ ಪಡೆದುಕೊಳ್ಳುತ್ತಿರುವುದರ ಹಿಂದಿನ ಮರ್ಮವೇನು? ಹೀಗಾಗಿ ಸಾತ್ವಿಕತೆಯಿಂದ ದೂರವುಳಿದಿರುವ ಹೋರಾಟಗಳ ತಾತ್ವಿಕತೆಯನ್ನು ಪ್ರಶ್ನಿಸಬೇಕಾಗಿದೆ. ಹೋರಾಟಗಳ ಹಿಂದಿನ ಅಜೆಂಡಾಗಳು, ಅದರ ಹಿಂದಿನ ಪ್ರೇರಣೆ ಎಲ್ಲವೂ ಕಾಂಗ್ರೆಸ್-ಎಡಪಕ್ಷಗಳದ್ದೇ ಆಗಿರುವಂತಿರುವುದು ಏಕೆ? ಅಥವಾ ಹೋರಾಟಗಳು ದಿಕ್ಕುತಪ್ಪಿ ಬೇರೆಯದೇ ಅಜೆಂಡಾದ ಅನುಷ್ಠಾನಕ್ಕೆ ವೇದಿಕೆಗಳಾಗುತ್ತಿರುವುದನ್ನು ಏನೆಂದು ಗುರುತಿಸಬೇಕು?

ಸರಳವಾಗಿ ಹೇಳಬೇಕೆಂದರೆ, ಕೆಲ ತಿಂಗಳ ಹಿಂದೆ ರಾಕೇಶ್ ಟಿಕಾಯಿತ್ ಅವರ ನಾಯಕತ್ವ(?!)ದಲ್ಲಿ ಕೃಷಿ ಕಾಯಿದೆಗಳ ತಿದ್ದುಪಡಿ ಖಂಡಿಸಿ ರೈತ ಚಳವಳಿಗಳು ನಡೆದವು. ಅದೂ ದೇಶಾದ್ಯಂತ ವಿಸ್ತರಿಸಿತು. ಕೊನೆಗೆ ಜನವರಿ 26 ರಂದು ಕೆಂಪುಕೋಟೆಯ ಮುಂದೆ ದೊಡ್ಡ ಹೋರಾಟ ನಡೆದು, ಅಲ್ಲಿ ಲಕ್ಷಾಂತರ ಜನರೂ ಸೇರಿದ್ದರು. ಅದರಲ್ಲಿ ಕೆಲವೊಂದಿಷ್ಟು ಜನ ಭಾರತದ ತ್ರಿವರ್ಣ ಧ್ವಜವನ್ನು ಅವರೋಹಣ ಮಾಡಿ, ಖಲಿಸ್ತಾನಿ ಧ್ವಜವನ್ನು ಆರೋಹಣ ಮಾಡಿಬಿಟ್ಟರು. ಅದೇ ಪ್ರತಿಭಟನೆಯಲ್ಲಿ ದೇಶ ವಿಭಜನೆ ಮಾಡಿ, ಖಲಿಸ್ತಾನಕ್ಕಾಗಿ ತಮ್ಮ ಕೂಗು ಎಬ್ಬಿಸಿದ್ದನ್ನೂ ಕೇಳಿದ್ದೇವೆ. ಸಿಎಎ- ಎನ್‌ಆರ್‌ಸಿ ವಿರುದ್ಧವಾಗಿ ನಡೆದ ಹೋರಾಟಗಳಲ್ಲೂ ಅಷ್ಟೇ, ಅಲ್ಲಿ ಹೋರಾಟವನ್ನು ಕಂಡಿದ್ದಕ್ಕಿಂತ ಬೂಟಾಟಿಕೆ, ಹಿಂಸೆ, ಹಲ್ಲೆ, ಧಂಗೆಗಳನ್ನೇ ನೋಡಿದ್ದು ಹೆಚ್ಚು.

ಹಾಗೆಯೇ ಹಿಜಾಬ್ ವಿಷಯ ಆಗಿರಬಹುದು. ಇತ್ತೀಚಿನ 'ನೂಪುರ್ ಶರ್ಮಾ' ಪ್ರಕರಣದ ಹೋರಾಟ ಇರಬಹುದು. ಇವೆಲ್ಲವೂ ಆಯಾ ಕಾಲಕ್ಕೆ, ವಿಷಯಕ್ಕೆ ಹುಟ್ಟಿಕೊಂಡರೂ ಅದರಲ್ಲಿ ಮೂಲ ವಿಷಯಕ್ಕಿಂತ ಬೇರೇಯದೇ ಹಿತಾಸಕ್ತಿಗಳು ಕೆಲಸ ಮಾಡಿದ್ದೇ ಹೆಚ್ಚು. ಇಲ್ಲೆಲ್ಲ ವ್ಯಕ್ತವಾಗಿದ್ದು, ಆಗುತ್ತಿರುವುದು ಪ್ರತಿಭಟನೆಗಿಂತ ದ್ವೇಷವೇ ಹೆಚ್ಚು. ಅದರಿಂದ ಬೇಡಿಕೆ ಪೂರೈಸಿಕೊಂಡಿರುವುದಕ್ಕಿಂತ, ಸಾರ್ವಜನಿಕ ಆಸ್ತಿಪಾಸ್ತಿ, ಹಲವರ ಪ್ರಾಣ ಹಾನಿಯಾಗಿದ್ದೇ ಹೆಚ್ಚು.

ಕರ್ನಾಟಕದಲ್ಲಿಯೇ ನಡೆದ ಅಖಂಡ ಶ್ರೀನಿವಾಸ್ ಅವರ ಅಳಿಯನ ವಿರುದ್ಧ ನಡೆದ ಹಿಂಸಾಕೃತ್ಯ ಇರಬಹುದು, ಹುಬ್ಬಳ್ಳಿಯ ಹುಡುಗ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿದ್ದ ಪೋಸ್ಟ್ ವಿರುದ್ಧದ ಹಿಂಸಾಚಾರ, ಕೋಲಾರದಲ್ಲಿನ ಐಫೋನ್ ಉತ್ಪಾದನಾ ಘಟಕಕ್ಕೆ ಮಾಡಿದ ಹಾನಿಯೂ ಇರಬಹುದು. ಕರೋನಾ ಪಿಡುಗಿನ ವೇಳೆ ಡಿಜೆ ಹಳ್ಳಿ ಕೆಜೆಹಳ್ಳಿಯಲ್ಲಿ ನಡೆದ ಘಟನೆಗಳೇ ಇರಬಹುದು... ಇಂಥ ಉದಾಹರಣೆಗಳು ಅನೇಕ. ಇವೆಲ್ಲ ನಡೆದದ್ದು ಯಾವುದೋ ದೊಡ್ಡ ವಿಚಾರದ ವಿರುದ್ಧ ಅಲ್ಲ, ಆದರೆ, ಸಾವಿರಾರು ಜನ ಸೇರಿ ಕೋಟ್ಯಂತರ ಆಸ್ತಿ ಪಾಸ್ತಿ ನಾಶ ಮಾಡಿದ್ದಲ್ಲದೇ ಹಲವರು ಅಮಾಯಕರು ಗಾಯಗೊಂಡರು. ಕೆಲವರ ಸಾವಿಗೂ ಕಾರಣವಾಗಿದ್ದಿದೆ. ಇದೆಲ್ಲ ಮುಗಿದ ಮೇಲೆ ಕೆಲವು ರಾಜಕೀಯ ನಾಯಕರುಗಳ ಬೇಳೆ ಬೇಯಿಸಿಕೊಳ್ಳುವ ಕಾರ್ಯಕ್ರಮವೂ ಇರುತ್ತದೆ ಬಿಡಿ!.

ಇಂಥ ಪ್ರತಿಭಟನೆಗಳ ಪಟ್ಟಿಯಲ್ಲಿ ಕಾಂಗ್ರೆಸ್‌ನ ಕೊಡುಗೆಯೂ ಇಲ್ಲದಿಲ್ಲ. ಬಿಜೆಪಿ ಸರಕಾರ ಬಂದಾಗಿನಿಂದ ಕಾಂಗ್ರೆಸ್ ಬಿಟ್ಟೂ ಬಿಡದೆ ಹೋರಾಟಗಳನ್ನು ನಡೆಸುತ್ತಲೇ ಬಂದಿದೆ. ಅದು ಒಳ್ಳೆಯದೇ, ಪ್ರತಿಪಕ್ಷವಾಗಿ ಸರಕಾರವನ್ನು ನಿಯಂತ್ರಿಸಲು ಇಂಥ ಹೋರಾಟಗಳ ಅಗತ್ಯ ಇದ್ದೇ ಇದೆ. ಆದರೆ ಆ ಹೋರಾಟಗಳು ಒಂದಾದರೂ ತಲೆ ಕಂಡವೇ? ಜನರಲ್ಲಿ ಭರವಸೆಯನ್ನು ಮೂಡಿಸಿದವೇ? ಚಳವಳಿಗಳು ಜನರ ವಿಶ್ವಾಸಕ್ಕೆ ಘಾಸಿ ಮಾಡುವಂತಹದ್ದಾಗಬಾರದು. ಹೆಚ್ಚೂ ಕಡಿಮೆ ಕಾಂಗ್ರೆಸ್ ಮಾಡುತ್ತಿರುವ ಎಲ್ಲ ಹೋರಾಟಗಳಲ್ಲಿ ಮೋದಿ ವಿರೋಧ ಬಿಟ್ಟು ಬೇರಿನ್ನೇನೂ ಕಾಣಿಸುತ್ತಲೇ ಇಲ್ಲ. ಈಗ ನಡೆಯುತ್ತಿರುವ ರಾಹುಲ್ ಇಡಿ ವಿಚಾರಣೆ ವಿರುದ್ಧದ ಹೋರಾಟವೂ ಇದೇ ಹಾದಿಯದ್ದು. 2012ರಲ್ಲಿ ಹೊರಬಿದ್ದ ನ್ಯಾಷನಲ್ ಹೆರಾಲ್ಡ್ ಪ್ರಕರಣದ ಸಲುವಾಗಿ ಜಾರಿ ನಿರ್ದೇಶನಾಲಯ ರಾಹುಲ್ ಮತ್ತು ಸೋನಿಯಾ ಗಾಂಧಿಯವರ ವಿಚಾರಣೆ ನಡೆಸುತ್ತಿದೆ. ಇದನ್ನು ವಿರೋಧಿಸಿ, ಸರಕಾರದ ವಿರುದ್ಧ ಪ್ರತಿಭಟನೆ ನಡೆಸುವುದರಲ್ಲಿ ಏನಿದೆ ಹೇಳಿ ಅರ್ಥ? ವಿಪರ್ಯಾಸ ಎಂದರೆ, ಕಾಂಗ್ರೆಸ್ ಇದನ್ನೂ ವಿರೋಧ ಮಾಡುತ್ತಿದೆ. ದೇಶಾದ್ಯಾಂತ ಹೋರಾಟಗಳನ್ನೂ ನಡೆಸುತ್ತಿದೆ. ಆರೋಪಿ ಸ್ಥಾನದಲ್ಲಿರುವವರ ರಕ್ಷಣೆಗಾಗಿ 'ಮೋದಿ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ' ಎಂಬ ಬಣ್ಣಕಟ್ಟಲಾಗುತ್ತಿದೆ.

ಹಾಗಾದರೆ ಕಾಂಗ್ರೆಸ್‌ನವರು ತಮ್ಮ ಸರಕಾರ ಇದ್ದಾಗಲೂ ಸಹ ಇಂಥದ್ದೇ ದ್ವೇಷ ರಾಜಕಾರಣ ಮಾಡಿದ್ದರೇ? ಆಗಿನ ವಿಚಾರಣೆಗಳೆಲ್ಲವೂ ರಾಜಕೀಯ ಕಾರಣಕ್ಕೆ ನಡೆದದ್ದೇ? ಇಲ್ಲಿ ನೋಡ ಬೇಕಾದ ಸಂಗತಿ ಏನೆಂದರೆ, ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಸೋನಿಯಾ ಮತ್ತು ರಾಹುಲ್ ಗಾಂಧಿಯಿಂದ ಯಾವುದೇ ಅಪರಾಧವಾಗಿಲ್ಲವೆಂದಾದರೆ ಹೋರಾಟವನ್ನೇಕೆ ಮಾಡಬೇಕು? ಭ್ರಷ್ಟಾಚಾರ ಪ್ರಕರಣದಲ್ಲಿ ಚಿದಂಬರಂ, ಹಾಗೂ ಅವರ ಪುತ್ರನ ಮೇಲಿನ ತನಿಖೆಯೂ ಅವರ ಪ್ರಕಾರ ದ್ವೇಷ ರಾಜಕಾರಣವೇ? ಹಾಗಿದ್ದರೆ ಭ್ರಷ್ಟಾಚಾರದ ವಿರುದ್ಧ ತನಿಖೆಯೇ ಅಪರಾಧವೇ?

ಇದೀಗ ಅಗ್ನಿಪಥ್ ಹೋರಾಟ ನಡೆದಿದೆ. ಸೇನೆಯ ಆಂತರಿಕ ನೇಮಕ ವಿಚಾರವೂ ಇವರಿಗೆ ರಾಜಕೀಯ ವಿರೋಧದ ಸಂಗತಿ!

ಕೆಲವೊಂದಿಷ್ಟು ತಿಂಗಳಿನಿಂದ ಸರಣಿಯಲ್ಲಿ ಹೋರಾಟಗಳು ನಡೆದುಕೊಂಡೇ ಬರುತ್ತಿವೆ. ಆಂದೋಲನ ಜೀವಿಗಳಿಗಂತೂ ಬಿಡು(?!)ವಿಲ್ಲದ ಕೆಲಸ. ವಿಚಾರಗಳು ಬೇರೆಬೇರೆಯಾಗಿರಬಹುದು, ಆದರೆ, ಆ ಹೋರಾಟಗಳಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಹೆಸರಿಗೆ ನಷ್ಟವಂತೂ ಆಗುತ್ತಿದೆ ಎಂಬುದು ಗಮನಾರ್ಹ. ಹಾಗೆ ದೇಶದ ಘನತೆಗೆ ಕುಂದು ತರುವುದೇ ಉದ್ದೇಶವೇ? ಹೋರಾಟಗಳು ಯಾವಾಗಲೂ ಸರಕಾರದ ಕಿವಿಹಿಂಡುವ ಕೆಲಸ ಮಾಡಬೇಕೆ ಹೊರತು, ದೇಶದ ಮಾನ ಹಾನಿ ಮಾಡುವ ಕೆಲಸವನ್ನಲ್ಲ. ಭಾರತ ಮೊದಲಿನ ಸ್ಥಿತಿಯಲ್ಲಿಲ್ಲ. ಲಕ್ಷಾಂತರ ಕೋಟಿ ಹೂಡಿಕೆ ಭಾರತವನ್ನು ಹುಡುಕಿಕೊಂಡು ಬರುತ್ತಿದೆ. ವಿಶ್ವದ ಅತಿದೊಡ್ಡ ಮಾರುಕಟ್ಟೆಯೂ ಭಾರತವೇ ಆಗಿದೆ. 2021-2022ರಲ್ಲಿ ನಮ್ಮ ದೇಶಕ್ಕೆ 83.57 ಬಿಲಿಯನ್ ಡಾಲರ್ ಹೂಡಿಕೆ ಬಂದಿದೆ. ಹಾಗೆಯೇ ಇಲ್ಲಿರುವ ನಿರುದ್ಯೋಗದ ಸಮಸ್ಯೆ, ಹಣದುಬ್ಬರದಂಥವೂ ಅಂತಾರಾಷ್ಟ್ರೀಯ ಹೂಡಿಕೆಯನ್ನು ಆಕರ್ಷಿಸುತ್ತಿದೆ. ಆಶ್ಚರ್ಯವಾಗಬಹುದು!. ಆದರೆ ನೆನಪಿಡಿ, ನಿರುದ್ಯೋಗವಿಲ್ಲದೇ, ಹಣದುಬ್ಬರವಿಲ್ಲದೇ ಇದ್ದರೆ, ಅಂತಹ ದೇಶದಲ್ಲಿ ಯಾವ ಕಂಪನಿಯೂ ತನ್ನ ಉತ್ಪಾದನಾ ಘಟಕ ತೆರೆಯುವುದಿಲ್ಲ, ಏಕೆಂದರೆ, ಕೆಲಸ ಮಾಡಲು ಸರಿಯಾದ ಉದ್ಯೋಗಿಗಳು ಸಿಗದೆ ಇರುವ ದೇಶದಲ್ಲಿ ಅವರು ಹೇಗೆ ತಾನೆ ತಮ್ಮ ಸಂಸ್ಥೆಯನ್ನು ನಡೆಸಬೇಕು?

ಯಾವುದೇ ಪ್ರಜಾತಂತ್ರ ರಾಷ್ಟ್ರವಿರಬಹುದು ಅಲ್ಲಿ ಹೋರಾಟಗಳು ನಡೆದರೆ ತಪ್ಪಿಲ್ಲ. ಆ ಹೋರಾಟಗಳಿಗೂ ತಾರ್ಕಿಕ ಅಂತ್ಯ ಇರಬೇಕು, ಅದರಲ್ಲಿ ಲಾಜಿಕ್ ಸಹ ಇರಬೇಕು. ಬರೀ ತಮ್ಮ ಬೇಳೆ ಬೇಯಿಸಿಕೊಳ್ಳಲು ಮಾಡುತ್ತಿದ್ದರೆ, ಅದನ್ನು ಹೇಗೆ ತಾನೆ ಹೋರಾಟ ಎಂದು ವ್ಯಾಖ್ಯಾನಿಸುವುದು ವಿರೋಧ ಮಾಡುವುದಕ್ಕೂ ಸಹ ಒಂದು ಇತಿಮಿತಿ ಇರುತ್ತದೆ, ವಿನಾ ಕಾರಣ ಅದನ್ನು ಮೀರಿ ದೇಶದ ಹೆಸರಿಗೆ ಆ ಹೋರಾಟಗಳು ಕಪ್ಪು ಚುಕ್ಕೆಗಳಾಗಿ ಮಾರ್ಪಾಡಾಗಬಾರದು.

## ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಅಗ್ನಿಪಥ್ ಹಿಂಸಾಚಾರ: ತನಿಖೆಯಾಗಲಿ

ಕೇಂದ್ರ ರಕ್ಷಣಾ ಸಚಿವಾಲಯ ಜಾರಿಗೆ ತಂದಿರುವ ಅಗ್ನಿಪಥ್ ಯೋಜನೆಯನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ಹಾಗೂ ಹಿಂಸಾಚಾರಗಳ ಹಿಂದೆ ಸಮಾಜ ವಿದ್ರೋಹಿ ಕೈವಾಡವಿರುವುದು ನಿಚ್ಚಳವಾಗಿದೆ. ಹಾಲಿ ಮತ್ತು ಮಾಜಿ ಸೇನಾಧಿಕಾರಿಗಳೂ ಸಹ ಈ ಯೋಜನೆಯ ಪರವಾಗಿರುವುದು ಹಾಗೂ ಈಗಾಗಲೇ ಇಂತಹ ಯೋಜನೆ ಹಲವಾರು ದೇಶಗಳಲ್ಲಿ ಪ್ರಚಲಿತದಲ್ಲಿರುವುದರಿಂದ ಅಗ್ನಿಪಥ್ ಯೋಜನೆ ನಮ್ಮ ದೇಶಕ್ಕೂ ಸೂಕ್ತವೆಂದು ಪರಿಗಣಿಸಬಹುದು. ಪ್ರತಿಪಕ್ಷಗಳು ಯೋಜನೆಯ ಮೂಲ ಉದ್ದೇಶವನ್ನು ನಕಾರಾತ್ಮಕ ರೀತಿಯಲ್ಲಿ ಯುವಜನತೆಯ ತಲೆಗೆ ತುಂಬಿ ಅಡ್ಡದಾರಿಗೆಳೆದು ದೇಶದಲ್ಲಿ ಅರಾಜಕತೆಯನ್ನು ಸೃಷ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ತನ್ನ ಪ್ರಾಣವನ್ನೇ ದೇಶ ಸೇವೆಗಾಗಿ ಮುಡುಪಾಗಿಟ್ಟು ಸೇನೆಯಲ್ಲಿ ಸೇವೆ ಸಲ್ಲಿಸಬಯಸುವ ದೇಶಪ್ರೇಮಿ ಮನಸ್ಥಿತಿಯುಳ್ಳ ಯಾವುದೇ ಯುವಕ ವಿದ್ರೋಹಿ ಕೃತ್ಯಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ. ಬಹುಶಃ ಯಾರದ್ದೋ ಪ್ರಲೋಭನೆಗೆ ಒಳಗಾಗಿ ಈ ರೀತಿಯ ಕೃತ್ಯಗಳಲ್ಲಿ ಪಾಲ್ಗೊಳ್ಳುತ್ತಿರುವುದು ಅಕ್ಷಮ್ಯ ಅಪರಾಧ. ಮಿಲಿಟರಿ ಪಡೆಗೆ ಸೇರಲಿಚ್ಛಿಸುವ ಅಭ್ಯರ್ಥಿಗಳು ತಾನು ಯಾವುದೇ ಪ್ರತಿಭಟನೆ, ಸಾರ್ವಜನಿಕ ಆಸಿಪಾಸ್ತಿ ನಷ್ಟದಲ್ಲಿ ಭಾಗಿಯಾಗಿರಲಿಲ್ಲವೆಂದು ಪೊಲೀಸರಿಂದ ಪ್ರಮಾಣ ಪತ್ರವನ್ನು ನೀಡಬೇಕಾಗುತ್ತದೆಂಬ ಸರಕಾರದ ನಿರ್ಣಯ ಸ್ವಾಗತಾರ್ಹ. ಅಗ್ನಿಪಥ್ ಯೋಜನೆಯ ಬಗ್ಗೆ ಪ್ರಜೆಗಳಲ್ಲಿ ಅರಿವು ಮೂಡಿಸುವಲ್ಲಿ ಸರಕಾರ ಎಡವಿದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಯುವ ಜನಾಂಗವೂ ಸಹ ತಮ್ಮ ವಿವೇಚನೆಯನ್ನು ಉಪಯೋಗಿಸಿ ನಿರ್ಣಯ ತೆಗೆದುಕೊಳ್ಳಬೇಕು. ಯಾರದ್ದೋ ತಾಳಕ್ಕೆ ತಕ್ಕಂತೆ ಕುಣಿದರೆ ದೇಶಕ್ಕೆ ನಷ್ಟವನ್ನುಂಟುಮಾಡುವುದಲ್ಲದೆ ಅವರೂ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಯುಜನಾಂಗದ ದಾರಿ ತಪ್ಪಿಸುತ್ತಿರುವ ದೇಶದ್ರೋಹಿಗಳನ್ನು ಕಂಡು ಹಿಡಿದು ಕಾನೂನು ಕ್ರಮ ಜರುಗಿಸಿ ಭವಿಷ್ಯದಲ್ಲಿ ಇಂತಹ ಕೃತ್ಯಗಳು ನಡೆಯದಂತೆ ಜಾಗ್ರತೆ ವಹಿಸಬೇಕಾಗಿದೆ.

**-ಜಿ.ನಾಗೇಂದ್ರ ಕಾವೂರು**

### ಎನ್‌ಡಿಎ ರಾಷ್ಟ್ರಪತಿ ಅಭ್ಯರ್ಥಿ ಸ್ವಾಗತಾರ್ಹ

ಮುಂದಿನ ತಿಂಗಳು ನಡೆಯಲಿರುವ ದೇಶದ ರಾಷ್ಟ್ರಪತಿ ಚುನಾವಣೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟದ ಅಭ್ಯರ್ಥಿಯನ್ನಾಗಿ ಒಡಿಶಾದ ಬುಡಕಟ್ಟು ಸಮುದಾಯದ ಮಹಿಳೆ, ಬಿಜೆಪಿಯ ಹಿರಿಯ ನಾಯಕಿ, ಜಾರ್ಖಂಡ್‌ನ ಮಾಜಿ ರಾಜ್ಯಪಾಲೆ 64 ವರ್ಷದ ದ್ರೌಪದಿ ಮುರ್ಮು ಅವರನ್ನು ಆಯ್ಕೆ ಮಾಡಿರುವುದು ಐತಿಹಾಸಿಕ, ಸ್ವಾಗತಾರ್ಹ ಬೆಳವಣಿಗೆ! ಕೆಳ ಆದಿವಾಸಿ ಸಮುದಾಯದ ಮಹಿಳೆಯನ್ನು ಬಿಜೆಪಿ ಪಕ್ಷವು ಗುರುತಿಸಿರುವುದು ಅಚ್ಚರಿಯಾದರೂ, ಉತ್ತಮ ನಿರ್ಧಾರ. ಈ ಹಿಂದೆ ಬಿಜೆಪಿಯು ವಿಜ್ಞಾನಿ ಅಬ್ದುಲ್ ಕಲಾಂ ರನ್ನು ದೇಶದ ರಾಷ್ಟ್ರಪತಿಯಾಗಿ ಆಯ್ಕೆಮಾಡಿ ಅಚ್ಚರಿ ಮತ್ತು ಮೆಚ್ಚುಗೆಗೆ ಕಾರಣವಾಗಿತ್ತು. ಲೆಕ್ಕಾಚಾರಗಳು ಏನೇ ಇರಲಿ ಕೆಳ ಸಮುದಾಯದ ವ್ಯಕ್ತಿಯನ್ನು ಗುರುತಿಸಿ, ಗೌರವಿಸಿದ್ದು ಸಹ ಗಮನಾರ್ಹ! ಇದರ ನಡುವೆ ಈ ಬಾರಿಯು ಸಹ ದೇಶದ ಹಿಂದುಳಿದ ಬುಡಕಟ್ಟು ಸಮುದಾಯದ ಮಹಿಳೆಯೊಬ್ಬರನ್ನು ದೇಶದ ಉನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನಕ್ಕೆ ತರುವ ಪ್ರಯತ್ನ ಮಾಡಿರುವುದು ಖಂಡಿತಾವಾಗಿಯೂ ಪ್ರಶಂಸನೀಯ.

**-ಶ್ರೀಧರ್ ಡಿ. ರಾಮಚಂದ್ರಪ್ಪ**